212(2)

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದು)

ಸಂಪುಟ 28 ಸಂಚಿಕೆ 176] ಗುರುವಾರ 5—4—45 [3 ಪೈ

ವಿವಿಧ ವರ್ತಮಾನ

ಮಿತ್ರರು ಟ್ರರ್ಕ್ ದ್ವೀಪದಲ್ಲಿ ಕಾಲೂರಿ, ಸಿಂಗಪ್ಪುರವನ್ನು ಹಿಡಿಯುವ ಆಲೋಚನೆಯನ್ನು ಮಾಡಿರುವರು.

ಚೈನಾವು ಇನ್ನು ಹದಿನೈದು ವರ್ಷದಲ್ಲಿ ಮೂರು ಲಕ್ಷ ಟನ್ ಹಡಗನ್ನು ಕಟ್ಟಲು ನಿಶ್ಚಯಿಸಿದೆ.

ಚೀಮೂರ್-ಆಷ್ಟಿ ಮೊಕದ್ದಮೆಯ 7 ಮಂದಿ ಖೈದಿಗಳನ್ನು ಗಲ್ಲಿಗೇರಿಸಲು ಆಜ್ಞೆಯಾಗಿದೆಯಷ್ಟೆ. ಆದರೆ ಒಂದು ಹೇಬಿಯಸ್‌ಕಾರ್ಪಸ್ ಅರ್ಜಿ ಬಂದಿರುವುದರಿಂದ ಈ ಖೈದಿಗಳ ಮರಣ ದಂಡನೆಯನ್ನು ಸಧ್ಯ ನಿಲ್ಲಿಸುವಂತೆ ಕೋರ್ಟ್ ಆಜ್ಞೆ ಮಾಡಿದೆ.

ಯುದ್ಧಾನಂತರ ಭಾರತದಲ್ಲಿ ಫಿಲ್ಮಂ ತಯಾರು ಮಾಡುವ ಕೈಗಾರಿಕೆಯನ್ನು ಈಗಿನಿಂದಲೇ ಯೋಚಿಸುವ ಕಾಲ ಇನ್ನೂ ಒದಗಿಲ್ಲವೆಂದು ಕೇಂದ್ರ ಸಭೆಯಲ್ಲಿ ಸರ್ಕಾರಿ ಉತ್ತರವಾಯಿತು.

ಪೆನ್ನಾರ್ ನದಿಯಲ್ಲಿ ಗಂಡಿಕೋಟ ಬಳಿ ಕಟ್ಟುವ ಅಣೆಕಟ್ಟು 100 ಅಡಿ ಎತ್ತರವಾಗಿ ಕಟ್ಟಬೇಕೆಂದಿರುತ್ತಾರೆ.

ಈಗ ಜರ್ಮನರಿಂದ ಬಿಡುಗಡೆಯಾದ ದೇಶಗಳ ನಿರ್ಗತಿಕರಿಗೆ ಹಂಚಲು 150 ಮಿಲಿಯನ್ ಪೌಂಡು ಬಟ್ಟೆ ಬೇಕಾಗಿದೆ. ಇಷ್ಟನ್ನೂ ಅಮೇರಿಕಾದವರು ದಾನ ಮಾಡುವರಂತೆ.

ಕೆಲಸ ಮಾಡುವುದರಲ್ಲೂ ಜಾತಿ, ಮತ, ಬಣ್ಣ ನೋಡಬಾರದೆಂದು ಮಸೂದೆ ತಿದ್ದುಪಡಿ ಮಾಡಲು ಅಮೇರಿಕಾದ 24 ಡಿಸ್ಟ್ರಿಕ್ಟುಗಳು ಒಪ್ಪಿಗೆ ಇತ್ತಿವೆ. ಆದರೆ ಉಳಿದವರು ಇನ್ನೂ ಬಾಯಿ ಬಿಟ್ಟಿಲ್ಲ.

ಖರಗ್‌ಪುರವು ರೈಲ್ವೆ ಕೇಂದ್ರ 12—3—45 ನೆಯ ದಿನದಲ್ಲಿ ಪರ್ಜನ್ಯಪ್ರಭಂಜನರು ಕೂಡಿ 25 ನಿಮಿಷಗಳೊಳಗಾಗಿ ಮಹಾ ಪ್ರಳಯವನ್ನು ಮಾಡಿದರು. ಈಗ ಅಲ್ಲಿ ಜೀವಿಸಿರುವ ಮುದುಕರೂ ಕೂಡ ಇದುವರೆಗೂ ಎಂದೂ ಇಂತಹ ಗಾಳಿಮಳೆಗಳನ್ನು ಕಂಡಿರಲಿಲ್ಲವಂತೆ. ಗುಡಿಸಲುಗಳು ಹಾರಿಹೋದವು. ಮನೆಗಳು ಬಿದ್ದುಹೋದವು. ಆಸ್ತಿಗೆ ಅಪಾರ ನಷ್ಟವು ಆಗಿದೆ. ಟೆಲಿಗ್ರಾಂ ಕಂಬಗಳು ಕಿತ್ತುಹೋದವು. ಅನೇಕ ಮಂದಿಗೆ ಗಾಯಗಳಾದವು. ಕೆಲವರ ಮರಣವೂ ಆಯಿತು.

ಮುಸ್ಸೋಲಿನಿಯ ಗತಿ ಏನು ?

ಲಂಡನ್ ಏ 3 — ಮುಸ್ಸೋಲಿನಿಯು ಸ್ವಿಡ್ಜರ್ಲೆಂಡಿನಲ್ಲಿ ತಲೆಮುಚ್ಚಿಕೊಳ್ಳಲು ಆಶ್ರಯ ಕೇಳಿದರೆ, ರಾಜಕೀಯ ನಿರಾಶ್ರಿತನಾಗಿ ಸ್ಥಳ ಸಿಕ್ಕುವುದಿಲ್ಲವೆಂದೂ, ಆದರೆ ಅನಾರೋಗ್ಯಕ್ಕಾಗಿ ಕೇಳಿದರೆ ಆಸರೆ ದೊರೆಯಬಹುದೆಂದೂ, ಸ್ವಿಸ್ ಸರ್ಕಾರವು ಇಟಲಿ ಸರಕಾರಕ್ಕೆ ತಿಳಿಸಿದೆಯೆಂದು ಲಂಡನ್ನಿನ ಅನೇಕ ಪತ್ರಿಕೆಗಳಿಗೆ ವರದಿಯಾಗಿದೆ. ಮುಸೋಲಿನಿ ಆರೋಗ್ಯ ಕೆಟ್ಟಿರುವುದೆಂದೂ, ಹೊಟ್ಟೆಯಲ್ಲಿ ವ್ರಣದಿಂದ ನರಳುತ್ತಿರುವನೆಂದೂ ಹೇಳಲಾಗಿದೆ.

ಏಪ್ರಿಲ್ 1 ರಲ್ಲಿ ರಷ್ಯನರು ಡ್ಯಾನ್‌ಜಿಗ್ ಹಿಡಿದಾಗ ಜರ್ಮನರ 45 ಸಬ್‌ಮೆರಿನ್, 151 ಹಡಗುಗಳು, ಹೇರಳ ಸಾಮಗ್ರಿಗಳು ದೊರೆತವು.

ಜಪಾನೀಯರ ಖೈದಿಗಳ ಕ್ಯಾಂಪಿನಿಂದ 66 ಮಕ್ಕಳನ್ನು ಅವರ ತಾಯಿತಂದೆಗಳ ಸಮೇತ ಅಮೇರಿಕನ್ ಸೇನೆಯವರು ಕರೆತಂದರು. ಇವರೆಲ್ಲಾ ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಯಲ್ಲಿದ್ದರು.

ಜಪಾನಿನಲ್ಲಿ ಬಿಳೀ ಜನರನ್ನು ದ್ವೇಷ ಮಾಡುವುದು ದಿನದಿನಕ್ಕೆ ಹೆಚ್ಚಿದೆ. ಅಲ್ಲಿರುವ ಸ್ವೀಡನ್ ರಾಯಭಾರಿಯು ಜಪಾನ್ ಸಂಗಡ ಸ್ನೇಹಭಾವ ತಪ್ಪಿಸುವುದು ಒಳ್ಳೆಯದೆಂದು ತನ್ನ ಸರ್ಕಾರಕ್ಕೆ ಬರೆದಿರುತ್ತಾನೆ.

ಅಲಿಫುರ್‌ನಲ್ಲಿ ಅನಸಾರ್ ಹುಸೇನ್ ಎಂಬ ಯುವಕನು ಎಡಬಿಡದೆ 87 ಘಂಟೆಗಳ ಕಾಲ ಸೈಕಲ್ ಮೇಲೆ ತಿರುಗುತ್ತಿದ್ದನು. ಇವನಷ್ಟು ದೀರ್ಘಕಾಲ ಯಾರು ಸೈಕಲ್ ಸವಾರಿ ಮಾಡಿರಲಿಲ್ಲ.

ಆಷ್ಟಿ ಮತ್ತು ಚಿಮೂರ್ ಮೊಕದ್ದಮೆ

ನಾಗಪುರ. ಏ 3

ಇಲ್ಲಿಗೆ ಬಂದ ವರ್ತಮಾನದಂತೆ ಆಷ್ಟಿ ಮತ್ತು ಚಿಮೂರ ಮೊಕದ್ದಮೆಯ ಖೈದಿಗಳಿಗೆ ಸಹಾನುಭೂತಿಯನ್ನು ತೋರಿಸುವ ಸಲುವಾಗಿ ಹೊಸ ದೆಹಲಿ ಅಹಮದಾಬಾದ್ ಶೋಲಾಪುರ ವಾರ್ಧಾ ಪೂನ ಮತ್ತು ಡಾಕ್ಕಾಗಳಲ್ಲಿ ಹರತಾಳಗಳು ನಡೆದವು. ಇಲ್ಲಿಯೂ ಈ ಖೈದಿಗಳ ದಿನಾಚರಣೆಯನ್ನು ಹರತಾಳ ರೂಪವಾಗಿ ನಡೆಸಿದರು, ಇದರಲ್ಲಿ ಅನೇಕ ಅಂಗಡಿಗಳು ಮತ್ತು ಗಿರಣಿಗಳು ಭಾಗ ವಹಿಸಿದ್ದವು.

ಬೊಂಬಾಯಿ. ಏ 3

ಆಷ್ಟಿ ಮತ್ತು ಚಿಮೂರ್ ಖೈದಿಗಳಿಗೆ ಸಹಾನುಭೂತಿ ತೋರಿಸುವ ಸಲುವಾಗಿ ಇಲ್ಲಿ ಹರತಾಳವನ್ನು ನಡೆಸಿದರು. ಮೆರವಣಿಗೆಯು ಕಾಲ್ಬಾದೇವಿ ರಸ್ತೆಯಿಂದ ಫಾನ್ಸವಾಡಿ ಕಡೆಗೆ ಹೋಗುತ್ತಿದ್ದಿತು. ಪೋಲಿಸರು ಮೆರವಣಿಗೆಯನ್ನು ಚದುರಿರೆಂದು ಕೇಳಿಕೊಂಡರೂ ಚದುರಲಿಲ್ಲವಾಗಿ ಹಗುರವಾದ ಲಾಠಿ ಏಟು ಕೊಟ್ಟು ಚದುರಿಸಿದರು.

ಹೊಸ ದೆಹಲಿ. ಏ 3

ಇಲ್ಲಿನ ವರ್ತಮಾನದಂತೆ ಕೇಂದ್ರ ಸಭೆಯಲ್ಲಿ ಆಷ್ಟಿ ಮತ್ತು ಚಿಮೂರ್ ಮೊಕದ್ದಮೆಯ ವಿಷಯವನ್ನು ಚರ್ಚಿಸುವರೆಂದೂ ಇದೇ ವಿಷಯವಾಗಿ ಶ್ರೀ ಜಿ. ವಿ. ದೇಶಮುಖರು ಸಣ್ಣ ಪ್ರಶ್ನೆಯನ್ನು ಕೇಳಿರುವರೆಂದೂ ತಿಳಿದು ಬಂದಿದೆ.

ಅಖಿಲ ಭಾರತ ರೈತರ ಸಮ್ಮೇಳನದ ಕಾರ್ಯದರ್ಶಿಯವರು ಈ ಖೈದಿಗಳ ಬಗ್ಗೆ ಒಂದು ಅರ್ಜಿಯನ್ನು ವೈಸರಾಯರಿಗೆ ಕಳುಹಿಸಿರುವರೆಂದು ತಿಳಿಯ ಬಂದಿದೆ.

ಯುದ್ಧ ವಾರ್ತೆ

ಪೂರ್ವ ರಣರಂಗ— ಬ್ರಾಟಿಸ್ಲಾವ ಬಳಿ ಭೀಕರ ಕದನವಾಗುತ್ತಿದೆ. ನ್ಯೂಸ್ಯಾಡ್', ಬ್ರಾಟಿಸ್ಲಾವಾ ಬಳಿ ಮತ್ತೊಂದು ನಗರ ರಷ್ಯನರ ವಶವಾಗಿ, ರಷ್ಯನರು ವಿಯಾನಾಕ್ಕೆ 12 ಮೈಲಿ ಹತ್ತಿರಕ್ಕೆ ನುಗ್ಗಿರುವರು.

ಬರ್ಮಾ ರಂಗ — ಭಾರತೀಯರು ಟಾಂಗ್‌ಜಪ್ ನಗರವನ್ನು ಆಕ್ರಮಿಸಿ, ರಾಜಿಗೆ ವಾಯುವ್ಯದಲ್ಲಿ ಎರಡು ಗ್ರಾಮಗಳನ್ನು ಸಹಾ ಹಿಡಿದುಕೊಂಡರು.!

ಜಪಾನ್— ರಾಜಧಾನಿಯ ಮೇಲೆ 300 ಅಮೇರಿಕನ್ ವಿಮಾನಗಳು ಹೋಗಿ ತೀವ್ರ ಧಾಳಿ ಮಾಡಿದವು. ಒಕಿನಾವಾದಲ್ಲಿನ ಕಾರಿಡಾಂ'ನಲ್ಲಿ ಅಮೇರಿಕನ್ ಸೇನೆ ಮುನ್ನುಗ್ಗಿದೆ.

ಜರ್ಮನಿ— ಕ್ಯಾಸಲ್, ಫುಲಾ ಆಸ್ನೆಬ್ರೂಕ್ ಹ್ಯಾಲಾ ಇವೆಲ್ಲವನ್ನೂ ಮಿತ್ರ ಸೇನೆ ಹಿಡಿದಿದೆ.

ಜರ್ಮನ್ ಸರ್ಕಾರ ಸ್ವಿಸ್ ಗಡಿಗೆ ಬಂದಿಲ್ಲವೆಂದೂ, ಬರ್ಲಿನ್ನಲ್ಲೇ ಇದೆಯೆಂದೂ ಜರ್ಮನ್ ವಾರ್ತೆ.

ಸಂಸ್ಥಾನದ ಸುದ್ದಿಗಳು

ಸಂಸ್ಥಾನದಿಂದ ಹೊರಗೆ ಸರ್ಕಾರಿ ರಹದಾರಿಯಿಲ್ಲದೆ ಯಾರೂ ದನಕರುಗಳ ಸಾಗಿಸಕೂಡದೆಂದು ಆಜ್ಞೆಯಾಗಿದೆ.

ದಿವಾನರ ಅಧ್ಯಕ್ಷತೆಯಲ್ಲಿ ಕಡೂರು ಜಿಲ್ಲಾ ಸಮ್ಮೇಳನವು ಮೇ 6—7 ರಲ್ಲಿ ನಡೆಯುವುದೆಂದು ಗೊತ್ತಾಗಿದೆ.

ಎಸ್. ಎಸ್. ಎಲ್. ಸಿ. ಪರೀಕ್ಷೆಯು ಮತ್ತೊಮ್ಮೆ ನಡೆಯುವ ವಿಷಯದಲ್ಲಿ ಇನ್ನೂ ಯಾವ ಸರ್ಕಾರೀ ಆಜ್ಞೆ ಹೊರಬಿದ್ದಿಲ್ಲವೆಂದು ತಿಳಿಯಬಂದಿದೆ.

* * *

ಆಕಾಶವಾಣಿ 6—4—45

ವೃತ್ತಾಂತ ಬೆಳಿಗ್ಗೆ 8-50, ಮಧ್ಯಾಹ್ನ 2-50, ಸಾ. 6-30, 7-30. ರಾತ್ರಿ 10. ಬೆ. 8 ದೇವರನಾಮ, 8-10 ಉಪನಿಷತ್ ವಾಚನ, 8-25 ಮುಖವೀಣೆ. ಮ. ೨ ಪಿಟೀಲು. ಸಾ. 7 ಕರ್ನಾಟಕ ಹಾಡುಗಾರಿಕೆ, 7-15 ದೇವೀ ಸ್ತೋತ್ರ, 8-15 ವಿವಿಧ ಗಾನ.

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 50-2-0
ಚಿನ್ನ ತೊಲ 1 ಕ್ಕೆ	72-14-0
ಬೆಳ್ಳಿ "	1-5-6

ಪ್ರಪಂಚದ ಭಂಗಾರ

ಅಮೇರಿಕಾದಲ್ಲಿ ಎರಡು ಸಾವಿರ ಮಿಲಿಯನ್ ಡಾಲರ್ ಭಂಗಾರ ಈ ಮೂರು ವರ್ಷದಲ್ಲಿ ಕರಗಿ, ಇತರ ದೇಶಗಳಲ್ಲಿ ಎರಡು ಸಾವಿರದ ಆರುನೂರು ಮಿಲಿಯನ್ ಡಾಲರ್ ಭಂಗಾರವು ಸೇರಿದೆ. ಇದರಲ್ಲಿ ಅರ್ಧದಷ್ಟು ದಕ್ಷಿಣ ಅಮೇರಿಕಾದವರ ಬಾಯಿಗೆ ಬಿದ್ದಿದೆ. ಸ್ವಿಟ್ಜರ್ಲೆಂಡ್, ಸ್ವೀಡನ್, ತುರ್ಕಿ, ಸ್ಪೇನ್, ದಕ್ಷಿಣ ಆಫ್ರಿಕಾ ಇವುಗಳೆಲ್ಲಾ ಭಂಗಾರವನ್ನು ಶೇಖರಿಸಿದವು. ರಷ್ಯಾ ವಿನಃ ಇತರ ಭಾಗಗಳಲ್ಲಿ ಭಂಗಾರದ ಉತ್ಪತ್ತಿ ಕಡಿಮೆಯಾಗುತ್ತಿದೆ.

ಮಂತ್ರಿಯ ರಾಜೀನಾಮೆ

ಪರ್ಷಿಯಾದ ವಿದೇಶಾಂಗ ಮಂತ್ರಿಯು ಕೆಲಸಕ್ಕೆ ರಾಜೀನಾಮೆ ಕೊಟ್ಟ ಪ್ರಯುಕ್ತ, ಸಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ಹೋಗುವುದಿಲ್ಲ. ಪರ್ಷಿಯಾದ ಲಂಡನ್ ರಾಯಭಾರಿಯೂ ಸಹ ಹೊರಡಲು ತಿರಸ್ಕರಿಸಿರುವನು.

ಕಂದಾಯ ಹಾಕಲು ಆಜ್ಞೆ

ಮದರಾಸಿನಲ್ಲಿರು ರೈಲ್ವೆ ಆಸ್ತಿಗಳ ಮೇಲೆ ಪೌರಸಭೆಯವರು ಕಂದಾಯ ವಸೂಲು ಮಾಡಲು ಸರ್ಕಾರದ ಅಪ್ಪಣೆ ದೊರೆತಿದೆ.

ಸ್ತ್ರೀಯರಿಗೆ ಕಛೇರಿ ಕೆಲಸ

ಮದರಾಸಿನ ಆಡಿಟ್ ಆಫೀಸಿನಲ್ಲಿ ಸ್ತ್ರೀಯರು ಕೆಲಸ ಮಾಡಲು ಅನುಮತಿ ದೊರೆಯಿತು.

ಅಮೇರಿಕದ ಔದಾರ್ಯ

ಯುದ್ಧಾನಂತರ ಜರ್ಮನಿ ಪ್ರಜೆಗಳು ಅನ್ನವಿಲ್ಲದೆ ಸಾಯುವುದನ್ನು ತಾವು ನೋಡಲಾರದೆ ಅವರಿಗೆಲ್ಲಾ ಬೇಕಾದಷ್ಟು ಆಹಾರ ಒದಗಿಸುತ್ತೇವೆಂದು ಅಮೇರಿಕಾ ನಿಶ್ಚಯಮಾಡಿದೆ.

ಕೆಲಸದಿಂದ ವಜಾ

ಬೆಜವಾಡದಲ್ಲಿ ನಾಲ್ಕು ಪೋಲೀಸ್ ಕಾನ್ಸ್ಟೇಬಲ್‌ಗಳು ಹದಿನೈದು ರೂಪಾಯಿಗಳನ್ನು ಒಬ್ಬನಿಂದ ಕದ್ದರೆಂದು, ಕೆಲಸದಿಂದ ವಜಾಮಾಡಲ್ಪಟ್ಟರು.

ಕೊಲಂಬೋದಲ್ಲಿ ಮುಷ್ಕರ

ಕೊಲಂಬೋ ರೇವಿನಲ್ಲಿ ಕೂಲಿಗಾರರು ಕೆಲಸಕ್ಕೆ ಬಾರದೆ ಮುಷ್ಕರ ಹಿಡಿದಿರುವರು. ನಾಗರೀಕರಿಂದ ಮಿಲಿಟರಿಯವರು ಕೆಲಸ ತೆಗೆದುಕೊಳ್ಳುತ್ತಿರುವರು. ಎರಡು ಆಸ್ಪತ್ರೆಗಳಲ್ಲಿ ಕೆಲಸಕ್ಕೆ ಬಂದರೂ, ಇತರ ಆಸ್ಪತ್ರೆಗಳಲ್ಲಿ ಮುಷ್ಕರ ನಿಂತಿಲ್ಲ. ಗಿರಣಿಗಳಲ್ಲೂ ಮುಷ್ಕರ ಒಂದೇ ರೀತಿಯಿದೆ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಶಕ್ತಿಸುಧಾ

At Ranjit ✿ Pagli Duniya
ರಣಜಿತ್ ಟಾಕೀಸಿನಲ್ಲಿ 4 ನೇ ಅಮೋಘ ವಾರ
ಪಗಲಿ ದುನಿಯಾ
(ಹಿಂದಿ)
ನುಮ್ತಾಜ್ ಶಾಂತಿ ಮೋತಿಲಾಲ್ ಷೇಕ್‌ಮುಖ್ತಾರ್
ಪಾತ್ರವಹಿಸಿರುವರು

AT OPERA — DOST
ಅಪೆರಾ ಟಾಕೀಸ್ 3 ನೇ ವಾರ
ಮೋತೀಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ
ದೋಸ್ತ್ (ಹಿಂದಿ)
From 7-4-45
Air Raid Wardens
With Stan Laurel & Oliver Hardy

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —
ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ ; ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ ; ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು
ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದ
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

For Good Printing—
L. N. Press
Srirampet MYSORE

TALK-A-TONE
(The Pioneer Film-mag of S. India)
From 1-3-45 Re. 1 per copy.
Local Agent—D. Mahaadev
Opera Talkies, Mysore

ಅಂದವಾದ ಹೋಲಿಗೆಗೆ
— ನಮ್ಮಲ್ಲಿ ಬನ್ನಿ —
ಶ್ರೀ ಮಹಾಲಕ್ಷ್ಮಿ ಹಾಲ್
ಸಯ್ಯಾಜಿರಾವ್ ರಸ್ತೆ, ಮೈಸೂರು

Good Coffee
Sastry's Coffee Rooms
Chamarajapuram, Mysore

Edited, Printed and published by M. S. Krishna Pao, at the Satvavadi Press, Chamaraja Agrahar, Mysore



ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು.